# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1103 (1225) |
| ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.03.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಮನಗರದಲ್ಲಿರುವ ಜಾನಪದ ಪರಿಷತ್ತಿನ ಮೂಲ ಕಾರ್ಯಭಾರಗಳೇನು/ ಉದ್ದೇಶಗಳೇನು ಅದರಲ್ಲಿ ಸಂಸ್ಥೆ ಸಾಧಿಸಿರುವ ಪ್ರಗತಿಗಳೇನು; (ಮಾಹಿತಿ ಒದಗಿಸುವುದು) | ಕನ್ನಡ ನಾಡಿನ ಜನಪದ ಕಲೆಗಳ ಸಂರಕ್ಷಣೆ, ಸಂವರ್ಧನೆ, ಪುನರುಜ್ಜೀವನ, ದಾಖಲೀಕರಣ, ಪ್ರಸಾರ ಮತ್ತು ಪ್ರಚಾರ ಮಾಡುವುದು ಜಾನಪದ ಪರಿಷತ್ತಿನ ಉದ್ದೇಶವಾಗಿದೆ.<br>ರಾಮನಗರದಲ್ಲಿರುವ ಜಾನಪದ ಪರಿಷತ್ತಿನ ಸಾಧನೆ:<br>• ಕರ್ನಾಟಕದ ಬುಡಕಟ್ಟು ಸಂಸ್ಕೃತಿಯನ್ನು ಬಿಂಬಿಸುವ "ಗಿರಿಜನ ಲೋಕ" ವನ್ನು ನಿರ್ಮಾಣ ಮಾಡಲಾಗಿದೆ.<br>• ಇಲ್ಲಿಯವರೆಗೆ ಸುಮಾರು 110 ಜಾನಪದೀಯ ಪುಸ್ತಕಗಳ ಪ್ರಕಟಣೆ ಮಾಡಿದೆ.<br>• ಕರ್ನಾಟಕ ರಾಜ್ಯ ಎಲ್ಲ ಹಳ್ಳಿಗಳಿಗೆ ತೆರಳಿ ಹಬ್ಬ-ಹರಿದಿನ, ಜಾತ್ರೆ-ಉತ್ಸವ ಇತ್ಯಾದಿಗಳನ್ನು ಚಿತ್ರೀಕರಿಸಿ ಮೊಟ್ಟ ಮೊದಲಿಗೆ ದೂರದರ್ಶನದಲ್ಲಿ ಜಾನಪದಕ್ಕೆ ಸಂಬಂಧಿಸಿದಂತ "ಸಿರಿಗಂಧ" ಎಂಬ ಹೆಸರಿನಲ್ಲಿ 109 ಎಪಿಸೋಡ್‌ಗಳಲ್ಲಿ ಪ್ರಸಾರವಾಗಿರುತ್ತದೆ.<br>• ಜನಪದ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ರಾಮನಗರದ ಜಾನಪದ ಲೋಕದ "ಜಾನಪದ ಮಹಾವಿದ್ಯಾಲಯದ" ಅಡಿಯಲ್ಲಿ ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸುತ್ತಾ ಬಂದಿದೆ.<br>ಕರ್ನಾಟಕ ಜಾನಪದ ಪರಿಷತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳನ್ನು ಪ್ರಾರಂಭಿಸಿ ಕಲಾಮೇಳಗಳನ್ನು ಆಯೋಜಿಸಿ, ರಚನಾತ್ಮಕ ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. |
| ಆ | ಕಳೆದ ಮೂರು ವರ್ಷಗಳಲ್ಲಿ ಈ ಜಾನಪದ ಪರಿಷತ್ತಿಗೆ ಸರ್ಕಾರ ನೀಡುವ ಅನುದಾನ ಎಷ್ಟು; ಈ ಸಂಸ್ಥೆಗೆ ಇತರೆ ಹಣದ ಮೂಲಗಳಿವೆಯೇ; ಇದ್ದಲ್ಲಿ ಅದರ ವಿವರಗಳೊಂದಿಗೆ ಸರ್ಕಾರ ಮತ್ತು ಇತರೆ ಮೂಲಗಳಿಂದ ಬಂದ ಅನುದಾನ/ ಆದಾಯ ಮತ್ತು ಖರ್ಚು ವೆಚ್ಚಗಳ ಮಾಹಿತಿ ಒದಗಿಸುವುದು; | ಕಳೆದ ಮೂರು ವರ್ಷಗಳಲ್ಲಿ ಜಾನಪದ ಪರಿಷತ್ತಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ಹಾಗೂ ವೆಚ್ಚದ ವಿವರವು ಕೆಳಕಂಡಂತಿರುತ್ತವೆ. |

| ಕ್ರ ಸಂ | ವರ್ಷ | ಬಿಡುಗಡೆ ಮಾಡಿದ ಅನುದಾನ | ಜಾನಪದ ಪರಿಷತ್ತಿಗೆ ಇತರೆ ಮೂಲಗಳಿಂದ ಸಂಗ್ರಹವಾದ ಅನುದಾನ | ಕಾರ್ಯಕ್ರಮಗಳು ಮತ್ತು ಆಡಳಿತಾತ್ಮಕ ವೆಚ್ಚಗಳು |
|---|---|---|---|---|
| 1 | 2023-24 | 1,00,00,000<br>1,00,00,000 | 1,50,59,400 | 2,02,62,538 |
| 2 | 2024-25 | 1,00,00,000 | 1,38,15,492 | 3,79,85,257 |
| 3 | 2025-26 | 1,00,00,000<br>58,17,000 | 1,15,11,780 | 2,52,66,068 |
| | **ಒಟ್ಟು** | **4,58,17,000** | **4,03,86,672** | **8,35,13,863** |

(ಇತರೆ ಮೂಲಗಳಿಂದ ಬಂದ ಅನುದಾನ/ಆದಾಯ-ಪ್ರವೇಶ ಧನ ಕಾಮತ್ ಲೋಕರುಚಿ ಬಾಡಿಗೆ ಹಾಗೂ ಇತರೆ ಮಳಿಗೆಗಳ ಬಾಡಿಗೆ)

| | | |
|---|---|---|
| ಇ | ಈ ಸಂಸ್ಥೆಯು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಸರ್ಕಾರವು ಹೆಚ್ಚಿನ ಅನುದಾನವನ್ನು ನೀಡಲು ಮುಂದಾಗದೆ ಇರಲು ಕಾರಣಗಳೇನು; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | 2023-24ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ರಾಮನಗರ ಜಿಲ್ಲೆಯ ಜಾನಪದ ಪರಿಷತ್ತಿನ ವ್ಯಾಪ್ತಿಗೆ ಬರುವ ಜಾನಪದ ಲೋಕಕ್ಕೆ ರೂ.2.00 ಕೋಟಿ ಅನುದಾನವನ್ನು ಘೋಷಣೆ ಮಾಡಿದ್ದು, ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 260 ಕಸಧ 2023, ದಿನಾಂಕ: 11.03.2024 ರಲ್ಲಿ ರೂ. 1.00 ಕೋಟಿ ಮತ್ತು ದಿನಾಂಕ:22.09.2025ರ ಆದೇಶದನ್ವಯ ರೂ.58.17 ಲಕ್ಷಗಳ ಅನುದಾನವನ್ನು ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು ಇವರಿಗೆ ಬಿಡುಗಡೆ ಮಾಡಿ, ಈ ಮೂಲಕ ಕರ್ನಾಟಕ ಜಾನಪದ ಪರಿಷತ್ತಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. |
| ಈ | ಜಾನಪದ ವಿಷಯದಲ್ಲಿ ಈ ಸಂಸ್ಥೆಯು ಉತ್ತಮ ಕಾರ್ಯ ನಿರ್ವಹಿಸುವಂತೆ ಹೆಚ್ಚಿನ ಅನುದಾನವನ್ನು ನೀಡಲು ಸ್ಪಷ್ಟ ನಿರ್ಧಾರಗಳೇನು? ಮಾಹಿತಿ ಒದಗಿಸುವುದು) | |

**ಸಂಖ್ಯೆ:ಕಸಂಪಾ 30 ಕವಿಸ 2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು